# ಕನ್ನಡ ಮಹಿಳಾ ನಾಟಕಗಳು:
# ಮಹಿಳಾ ಅಸ್ಮಿತೆ ಮತ್ತು ಶೋಷಣೆಯ ನೆಲೆಗಳು

**ಆಶಾಲತಾ***

DOI: https://doi.org/10.5281/zenodo.22107962

**ABSTRACT**

ಕನ್ನಡ ಸಾಹಿತ್ಯಕ್ಕೆ ಮಹತ್ವದ ಪರಂಪರೆಯಿದೆ. ಅದು ಬೇರೆ-ಬೇರೆ ಸಾಹಿತ್ಯ ಪ್ರಕಾರಗಳ ಮೂಲಕ ಬೆಳೆದು ಬಂದಿದೆ. ಅವುಗಳಲ್ಲಿ ನಾಟಕ ಪ್ರಕಾರವೂ ಮಹತ್ವದ್ದಾಗಿದೆ. ಕನ್ನಡ ನಾಟಕಕಾರ್ತಿಯರ ವಸ್ತುವಿಷಯಗಳ ಆಯ್ಕೆಯ ವ್ಯಾಪ್ತಿ ವಿಶಾಲವಾದದ್ದು. ಸಮಾಜದ ಬೇರೆ ಬೇರೆ ವಸ್ತು-ಸಂಗತಿ, ಸಂವೇದನೆಗಳನ್ನು ಚರಿತ್ರೆ, ಪುರಾಣ, ಜಾನಪದ ಆಧುನಿಕ ಸಮಾಜದ ತಲ್ಲಣಗಳನ್ನು ಸಹ ತಮ್ಮ ನಾಟಕಗಳ ವಸ್ತುವಾಗಿಸಿಕೊಂಡಿದ್ದಾರೆ. ವಸ್ತು ಯಾವುದೇ ಆದರೂ ಈ ಕಾಲದ ಸಂವೇದನೆಗಳಿಗೆ ಅನುಗುಣವಾಗಿ, ಅಗತ್ಯಗಳಿಗೆ ಅನುಸಾರವಾಗಿ ಅವುಗಳನ್ನು ನಿರ್ವಹಿಸಿರುವುದು ಮಹತ್ವದ್ದಾಗಿದೆ. ಸಾಹಿತ್ಯವನ್ನು ಮನರಂಜನೆಯ ಸಾಧನ ಎಂಬ ಅರಿವು ಇಲ್ಲಿನ ನಾಟಕಗಳದ್ದಲ್ಲ. ಸಮಾಜದ ಸಾಂಸ್ಕೃತಿಕ ಚಲನಶೀಲತೆಯನ್ನು ಗಂಭೀರವಾಗಿ ಮುಖಾಮುಖಿಗೊಂಡಿರುವ ನಾಟಕಕಾರ್ತಿಯರು ಅದರ ಭಾಗವಾದ ಶಿಕ್ಷಣದ ಬಿಕ್ಕಟ್ಟುಗಳು, ಕೃಷಿ ಸಮಸ್ಯೆ, ಮಾರುಕಟ್ಟೆಯ ಸರಕು ಸಂಸ್ಕೃತಿ, ಜಾತಿ ಶೋಷಣೆ, ನಿರುದ್ಯೋಗ, ಭಾಷಾ ಸಮಸ್ಯೆ, ರೈತರ ಆತ್ಮಹತ್ಯೆ, ಜಾಗತೀಕರಣ ಸೃಷ್ಟಿಸಿರುವ ಬಿಕ್ಕಟ್ಟು, ಅದರಲ್ಲೂ ಮಹಿಳಾ ಕೇಂದ್ರಿತ ಸಮಸ್ಯೆಗಳಾದ ಅತ್ಯಾಚಾರ, ಭ್ರೂಣಹತ್ಯೆ, ಬಾಲ್ಯವಿವಾಹ, ಅಂತರ್ಜಾತಿ ವಿವಾಹ, ವರದಕ್ಷಿಣೆ, ಕೌಟುಂಬಿಕ ದೌರ್ಜನ್ಯಗಳಂತಹ ಅನೇಕ ವಿಚಾರಗಳ ಕುರಿತ ವೈಚಾರಿಕ ಪ್ರಜ್ಞೆ ನಾಟಕಕಾರ್ತಿಯರ ಒಟ್ಟು ನಾಟಕಗಳ ತಾತ್ವಿಕ ಸ್ವರೂಪದ ಭಾಗವಾಗಿದೆ. ಮಾತೃತ್ವ, ಪ್ರಕೃತಿ, ವೇಶ್ಯೆ, ಸಮಾಜದಲ್ಲಿನ ಯುದ್ಧ ದಾಹದ ಪರಿಣಾಮಗಳು ಮತ್ತು ಜಾಗತೀಕರಣದ ನಂತರದಲ್ಲಿ ಹೆಚ್ಚಾದ ಸರಕು ಸಂಸ್ಕೃತಿಯ ಭಾಗವಾದ ಮಹಿಳಾ ಮಾರಾಟದ ವಿಷಯಗಳನ್ನು ಸಮಾಜದ ಆರೋಗ್ಯದ ದೃಷ್ಟಿಯಿಂದ ಅನುಸಂಧಾನಗೊಂಡಿದ್ದಾರೆ. ಹೀಗೆ ನಾಟಕಕಾರ್ತಿಯರು ಬಹುವಿಷಯಕೇಂದ್ರಿತ ನೆಲೆಯಲ್ಲಿ ನಾಟಕಗಳನ್ನು ರಚಿಸಿದ್ದು ಪ್ರಸ್ತುತ ಪ್ರಬಂಧದಲ್ಲಿ ಅವುಗಳ ತಾತ್ವಿಕ ವಿಶ್ಲೇಷಣೆಗೆ ಅವಕಾಶ ಮಾಡಿಕೊಟ್ಟಿವೆ.

ಪ್ರೇಕ್ಷಕಳಾಗಿದ್ದ ಮಹಿಳೆ ನಾಟಕ ರಚನೆಯ ಹಂತಕ್ಕೆ ಬರುವುದಕ್ಕೆ ದೊಡ್ಡ ಸಮಯವೇ ಬೇಕಾಯಿತು. ಹೀಗೆ ನಾಟಕ ರಚನೆಗೆ ತೊಡಗಿದ ಮಹಿಳೆ ಸಂಸ್ಕೃತಿ, ಸಮಾಜ, ಸಾಹಿತ್ಯ,

* **ಡಾ. ಆಶಾಲತಾ,** ಉಪನ್ಯಾಸಕರು, ಕನ್ನಡ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು.

ಚರಿತ್ರೆ, ಪುರಾಣ, ಜಾನಪದಗಳಂತಹ ವಸ್ತು ಸಂಗತಿಗಳಲ್ಲಿ ಪುರುಷ ಪ್ರಧಾನ ಸಮಾಜ ಅಪೇಕ್ಷಿಸುವ ಚೌಕಟ್ಟಿನ ಅನೇಕ ಸಂಗತಿಗಳ ಬಗ್ಗೆ ಬರೆಯುತ್ತಾ, ಅವುಗಳನ್ನು ಪರಾಮರ್ಶಿಸುತ್ತಾ ಪ್ರಶ್ನೆಗೊಳಪಡಿಸಿರುವುದನ್ನು ಕಾಣಬಹುದು.

**KEYWORDS:** ರಂಗಭೂಮಿ, ನಾಟಕಕಾರ್ತಿ, ಶೋಷಣೆ, ಕ್ರೌರ್ಯ, ವೇಶ್ಯೆ, ಮಾರಾಟ.

---

ಸಮಾಜದಲ್ಲಿ ಅನುಭವಿಸುತ್ತಿರುವ ಅನೇಕ ಅವಮಾನಕರ ಹಿಂಸಾತ್ಮಕ ಸಂಗತಿಗಳಲ್ಲಿ ವೇಶ್ಯಾವೃತ್ತಿಯೂ ಒಂದು. ಸಾಮಾನ್ಯವಾಗಿ ಹಣಕಾಸಿನ ಪ್ರತಿಫಲ ಅಪೇಕ್ಷೆಯಿಂದ ಲೈಂಗಿಕ ಚಟುವಟಿಕೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳುವುದನ್ನು ವೇಶ್ಯಾವೃತ್ತಿ ಎಂದು ಕರೆಯಲಾಗುತ್ತದೆ. ಇದು ಆರಂಭದಿಂದಲೂ ಹೆಣ್ಣಿನ ಮನಃಪೂರ್ವಕ ಆಯ್ಕೆಯೇ ಎಂದು ಯೋಚಿಸಿದರೆ ಅನೇಕ ವಿಚಾರಗಳು ತೆರೆದುಕೊಳ್ಳುತ್ತವೆ. ಈಗ ಪ್ರಪಂಚದಾದ್ಯಂತ ಈ ವೃತ್ತಿ ರೂಢಿಯಲ್ಲಿದೆಯಾದರೂ ಭಾರತೀಯ ಸಂದರ್ಭದಲ್ಲಿ ಇದರ ಹಿನ್ನೆಲೆ, ಅದರ ಹಿಂದಿನ ಪುರುಷ ಪ್ರಧಾನ ಸಾಂಸ್ಕೃತಿಕ ರಾಜಕಾರಣಿ ಬೇರೆ ನೆಲೆಯದೇ ಆಗಿದೆ. ಭಾರತೀಯ ಸಾಮಾಜಿಕ ವ್ಯವಸ್ಥೆ ಜಾತಿ ಪ್ರಧಾನವಾಗಿದ್ದು ಅದು ಅಂತಿಮ ನಿರ್ಧಾರಕ ಅಂಶವಾಗಿ ಕೆಲಸ ಮಾಡುತ್ತದೆ. ಆರಂಭದಲ್ಲಿ ಕೆಳ ಜಾತಿ, ಕೆಳವರ್ಗದ ಮಹಿಳೆಯರೇ ಇದಕ್ಕೆ ಬಲಿಯಾಗಿದ್ದು. ಸಂಪ್ರದಾಯದ ಹೆಸರಿನಲ್ಲಿ ಎಂಬುದು ಮುಖ್ಯ ವಿಚಾರ. ನಂತರದ ದಿನಗಳಲ್ಲಿ ಬಡತನ, ನಿರ್ಗತಿಕತನ, ನಿರುದ್ಯೋಗ, ವರದಕ್ಷಿಣೆ, ಪ್ರೀತಿಯಲ್ಲಿ ಮೋಸ, ಬಾಲ್ಯ ವಿವಾಹ, ವೈಧವ್ಯ, ಕುಟುಂಬ ನಿರ್ವಹಣೆ, ಅತ್ಯಾಚಾರ, ವಿಲಾಸಿ ಜೀವನ ಮುಂತಾದ ಅಂಶಗಳು ಮಹಿಳೆ ವೇಶ್ಯೆಯಾಗಲು ಕಾರಣಗಳಾಗಿವೆ. ಇತ್ತೀಚಿನ ದಿನಗಳಲ್ಲಿ ಗಂಡು ಸಹ ಈ ವೃತ್ತಿಯಲ್ಲಿ ತೊಡಗಿರುವದನ್ನು ಕಾಣಬಹುದು. ಮಹಿಳೆಯನ್ನು ಲೈಂಗಿಕ ಭೋಗಲಾಲಸೆಗಳಿಗೆ ಬಳಸಿಕೊಳ್ಳುವ ಹುನ್ನಾರವೇ ಇದರ ಪ್ರಧಾನ ಸಂವೇದನೆಯಾಗಿದ್ದು, ಇದರಿಂದ ಮಹಿಳೆ ಸದಾ ಅತಂತ್ರ ಸ್ಥಿತಿಯಲ್ಲಿರುವ ಸಂದರ್ಭ ಏರ್ಪಟ್ಟಿದ್ದು ಅನೇಕ ಅವಕಾಶ ವಂಚಿತಳಾಗಿ ಬದುಕುತ್ತಿರುವುದು ಶೋಚನೀಯ. ಇಂತಹ ವೇಶ್ಯಾ ಬದುಕಿನ ಸಂವೇದನೆಯನ್ನು ನಾಟಕಕಾರ್ತಿಯರು ತಮ್ಮ ನಾಟಕಗಳಲ್ಲಿ ಚರ್ಚಿಸುವ ಬಗೆಯನ್ನು ಕಾಣಬಹುದು. ಈ ನೆಲೆಯಲ್ಲಿ ಇಂದಿರಾ ಹಾಲಂಬಿಯವರ 'ಶ್ರೀ ಕೃಷ್ಣದೇವರಾಯ' ಮತ್ತು ಎಚ್.ಎಲ್.ಪುಷ್ಪ ಅವರ 'ಭೂಮಿಯಲ್ಲ ಇವಳು' ನಾಟಕಗಳು ಮುಖ್ಯವಾಗಿವೆ. 'ಶ್ರೀಕೃಷ್ಣದೇವರಾಯ' ನಾಟಕವು ಇಂದಿರಾ ಹಾಲಂಬಿಯವರು ಬರೆದಿರುವ ಚಾರಿತ್ರಿಕ ನಾಟಕ. ಶ್ರೀ ಕೃಷ್ಣದೇವರಾಯರ ಜೀವಿತ ಕಾಲದ ಕೆಲವು ಪ್ರಮುಖ ಘಟನೆಗಳನ್ನು ಇಲ್ಲಿ ಅನಾವರಣಗೊಳಿಸಿದ್ದಾರೆ. ರಾಜ ವೀರನರಸಿಂಹ ಕೃಷ್ಣದೇವರಾಯನ ಕಣ್ಣು ಕೀಳಿಸಿ ತನ್ನ ಮಗ ಈಶ್ವರನಿಗೆ ಪಟ್ಟ ಕಟ್ಟಬೇಕೆಂದು ಆಜ್ಞೆಯೊಂದಿಗೆ ಆರಂಭಗೊಳ್ಳುವ ನಾಟಕ ತಿಮ್ಮರಸ ಮತ್ತು ಕೃಷ್ಣದೇವರಾಯನ ಸಾವಿನೊಂದಿಗೆ ಅಂತ್ಯವಾಗುತ್ತದೆ. ಈ ಎಲ್ಲಾ ಘಟನೆಗಳ ನಡುವೆ ಕೃಷ್ಣದೇವರಾಯ ಮತ್ತು ಚಿನ್ನಾಂಬಿಕೆಯ ನಡುವಿನ ಪ್ರೇಮ ಪ್ರಸಂಗ ಗಮನ ಸೆಳೆಯುತ್ತದೆ. ಪಟ್ಟಾಭಿಷೇಕಗೊಂಡು ರಾಜ್ಯದ ಅಧಿಕಾರ ಸ್ವೀಕರಿಸಬೇಕಾದ ಕೃಷ್ಣ ದೇವರಾಯ ವೇಶ್ಯಾಕುಲದ ಚಿನ್ನಾಂಬಿಕೆಯನ್ನು ಮದುವೆಯಾಗುವುದು ರಾಜ್ಯಕ್ಕೆ ಮತ್ತು ರಾಜನಿಗೆ ಒಂದು ಕಳಂಕವೆಂಬ ಸಂಗತಿಯನ್ನು ತಿಮ್ಮರಸ ಪ್ರಸ್ತಾಪಿಸುತ್ತಾನೆ. ತಿಮ್ಮರಸ ಮತ್ತು ಚಿನ್ನಾಂಬೆಯ ಸಂಭಾಷಣೆ ರಾಜಪ್ರಭುತ್ವದ ಅಹಂಕಾರ ಮತ್ತು ಕುಲ–ಪ್ರೀತಿಯ ಪ್ರಾಮುಖ್ಯತೆಯನ್ನು ಅನಾವರಣಗೊಳಿಸುತ್ತದೆ.

"ತಿಮ್ಮರಸ: ಕೇಳಿಲ್ಲಿ !.. ನಿನ್ನ ಕುಲ... ನೆಲೆ ಇವುಗಳನ್ನಲ್ಲ ನೀನು ಬಲ್ಲೆಯಲ್ಲ ?

ಚಿನ್ನಾಂಬೆ: (ದುಃಖದಿಂದ) ಬಲ್ಲೆ ಒಡೆಯಾ! ಹೇಳಲು ಹೇಸಬೇಕಾಗಿರುವ ವೇಶ್ಯಾ ಕುಲದಲ್ಲಿ ನಾನು ಜನ್ಮ ತಾಳಿದರೂ ಆ ಕುಲದ ಪದ್ಧತಿಯನ್ನೇ ದ್ವೇಷಿಸಿ ದೇವನೊಪ್ಪುವಂತಹ ನೀತಿಯ ಜೀವನ ನಡೆಸಬೇಕೆನ್ನುವುದೇ ನನ್ನ ಬದುಕಿನ ನೆಲೆ!... ಅವರ ಪ್ರೇಮವೊಂದೇ ನನ್ನ ಸರ್ವಸಂಪತ್ತು ಇದಕ್ಕಿಂತ ಹೆಚ್ಚಿನದು ನನಗೇನು ಬೇಕಿಲ್ಲ...

ತಿಮ್ಮರಸ: ಆದರೆ,... ಕೃಷ್ಣ ದೇವರಾಯ ನಾಳೆ ಈ ಸಾಮ್ರಾಜ್ಯದ ಸಾರ್ವಭೌಮರಾಗುವವರು. ಅಂತಹವರು ಪಾತರದವರ ಕೈಹಿಡಿದರೆ ಮಾನ ಉಳಿದೀತೆ? ... ಈ ವಿಚಾರವನ್ನು ನೀನು ಬಿಟ್ಟು ಬಿಡಬೇಕು!

ಚಿನ್ನಾಂಬೆ: ಮಹಾಸ್ವಾಮಿ!... ದಯವಿಟ್ಟು ಹಾಗೆನ್ನಬೇಡಿ... ನನ್ನ ಕುಲ ಒಂದನ್ನೇ ನೋಡಿ ಶೀಲಕ್ಕೆ ಬೆಲೆಕಟ್ಟ ಬೇಡಿ. ಕೆಸರಿನಲ್ಲೂ ಕಮಲ ಹುಟ್ಟುವುದೇಂಬುದನ್ನು ಪ್ರಾಜ್ಞರಾದ ತಮಗೆ ನಾನು ಹೇಳಬೇಕೇ?... ಯುವರಾಜರಿಗಾಗಿಯೇ ನನ್ನ ತನುಮನಗಳು ಸಮರ್ಪಿತವಾಗಿವೆ!"[1]

ಈ ಸುದೀರ್ಘ ಸಂಭಾಷಣೆಯಲ್ಲಿ ಕಾರಣಕ್ಕಾಗಿ ಚಿನ್ನಾಂಬೆಯ ಪ್ರೀತಿಯನ್ನು ಕೀಳಾಗಿ ಅಥವಾ ಅಪವಾದವೆಂಬಂತೆ ನೋಡುವ ತಿಮ್ಮರಸನಿಗೆ ತನ್ನ ಪ್ರೀತಿಯ ಗಾಂಭೀರ್ಯತೆಯನ್ನು ತಿಮ್ಮರಸನಿಗೆ ಅರ್ಥೈಸಲು ಪ್ರಯತ್ನಿಸುತ್ತಾಳೆ. ಇಲ್ಲಿ ವೇಶ್ಯಾಕುಲದ ಸೃಷ್ಟಿ ಕರ್ತರ ಸಾಂಸ್ಕೃತಿಕ ರಾಜಕಾರಣದ ಹೀಯಾಳಿಕೆಯಲ್ಲ. ಅದಕ್ಕೆ ಬಲಿಯಾದವರ ತಿರಸ್ಕಾರವಿದೆ. ಪ್ರಭುತ್ವ ತನ್ನ ಅನುಕೂಲಕ್ಕೆ ಪೂರಕವಾದುದನ್ನು ಪುರಸ್ಕರಿಸಿ, ಉಳಿದಿದ್ದನ್ನು ತಿರಸ್ಕರಿಸುವ ನೀತಿ ಇಲ್ಲಿ ಪರಿಚಯಗೊಂಡಿದೆ. ಚಿನ್ನಾಂಬಿಕೆ ಕೃಷ್ಣ ದೇವರಾಯನೊಂದಿಗಿನ ಪ್ರೀತಿಯನ್ನು ತಿರಸ್ಕರಿಸಲು ಹತ್ತು ಸಾವಿರ ವರಹಗಳನ್ನು ನೀಡುವ ಆಸೆಯನ್ನು ಮುಂದಿಡುವುದು ಸಹ ಎಲ್ಲವನ್ನು ಬಂಡವಾಳದ ದೃಷ್ಟಿಯಿಂದ ನೋಡುವ ಪ್ರಭುತ್ವದ ನೀತಿಯನ್ನು ಪರಿಚಯಿಸುತ್ತದೆ. ಹಾಗೆಯೇ ಚಿನ್ನಾಂಬಿಕೆ ಇದಕ್ಕೆ ಒಪ್ಪದಿದ್ದಲ್ಲಿ ಶೂಲಕ್ಕೆ ಏರಿಸುವ ಬೆದರಿಕೆ ಒಡ್ಡುವುದು ಪ್ರಭುತ್ವದ ಆಕ್ರಮಣಾಕಾರಿ ನೀತಿಯನ್ನು ತೋರಿಸುತ್ತದೆ. ಕೃಷ್ಣ ದೇವರಾಯ ತನ್ನ ಪ್ರೀತಿಯನ್ನು ಉಳಿಸಿಕೊಳ್ಳಲು ಮುಂದಾದರೂ ಎರಡನೇ ಪತ್ನಿಯಾಗಿ ಸ್ವೀಕರಿಸಬೇಕೆಂದು ರಾಜಗುರು, ತಿಮ್ಮರಸ ಮತ್ತು ತಾಯಿಯ ನಿಲುವು ಕೊನೆಗೂ ಚಿನ್ನಾಂಬಿಕೆಯನ್ನು ಎರಡನೇ ದರ್ಜೆಯಲ್ಲಿಯೋ ನೋಡುವ ಸ್ವೀಕರಿಸುವಲ್ಲಿ ರಾಜಪ್ರಭುತ್ವವೇ ಮೇಲುಗೈ ಸಾಧಿಸುತ್ತದೆ. ಪುರುಷ ಪ್ರಭುತ್ವ ನಿರ್ಮಿತ ವೇಶ್ಯಾವೃತ್ತಿ ಇಲ್ಲಿ ಮಹಿಳೆಯನ್ನು ಅವಮಾನಕ್ಕೆಡಾಗುವಂತೆ ಮಾಡಿದೆ.

ಎಚ್. ಎಲ್ ಪುಷ್ಪ ಅವರ 'ಭೂಮಿಯಲ್ಲ ಇವಳು' ಜನ್ನನ ಯಶೋಧರ ಚರಿತೆಯನ್ನು ಆಧರಿಸಿ ರಚನೆಯಾಗಿದೆ. ಪುನರ್ ಕಥನದ ಮಾದರಿಯಲ್ಲಿ ರಚನೆಯಾಗಿರುವ ಈ ನಾಟಕ ಪರಿಪೂರ್ಣತೆಗೆ ಅನುಗುಣವಾಗಿ ಅನೇಕ ಸಂಗತಿಗಳನ್ನು ಚರ್ಚೆಗೆ ತೆಗೆದುಕೊಂಡಿದೆ. ಅದರಲ್ಲಿ ವೇಶ್ಯಾ ಬದುಕಿನ ಭಿನ್ನ ಆಯಾಮವನ್ನು ಕಟ್ಟಿಕೊಟ್ಟಿದೆ. ಮಾಗಿದ ವ್ಯಕ್ತಿತ್ವದಂತಿರುವ ತಿಪ್ಪಜ್ಜಿ ಮೂಲತಃ ವೇಶ್ಯೆಯಾಗಿದ್ದು ತನ್ನ ಬದುಕಿನ ವಿವರಗಳೊಂದಿಗೆ ಕಥೆಯಾಗಿಸಿ ಹೇಳುತ್ತಾಳೆ. ವೇಶ್ಯೆಯರ ದೈನಂದಿನ ಬದುಕಿನ ತಲ್ಲಣಗಳನ್ನು ನಾಟಕ ವಿವರಗಳು ಕಟ್ಟಿಕೊಡುತ್ತದೆ. ವೇಶ್ಯೆ ಸಂಕಷ್ಟಗಳನ್ನು ತಿಪ್ಪಜ್ಜಿ ಹೀಗೆ ವಿವರಿಸುತ್ತಾಳೆ.

"ಅಜ್ಜಿ: ....ಈ ಕೈಯಾನಾಗ ಕೂಸ್‌ನ, ಆಕೈಯಾನಾಗ ಮಿಂಡನ್ನ ಅದ್ಯಾಗ ಸಂಭಾಳಿಸೋದು ಅಂತ ನನ್ನ ಯೋಚನೆ. ನಮ್ಮ ಕುಲ ಗರತೀರ ಕುಲಕ್ಕಿಂತ ಒಂದು ಕೈ ಹೆಚ್ಚಿನ ಕುಲ. ಅದಕಾ ಮೈತುಂಬಾ ಕಣ್ಣಿರಬೇಕ. ಗರತೀರಿಗೆ ಒಬ್ಬನೇ ಗಂಡ ಅವನೇ ದೈವ.

ಅವನೇ ಅನ್ನಕ್ಕೆ ಮೂಲ. ಒಂದು ತರಾ ದಿನಾ ಉಣ್ಣೋ ಊಟದಾಗ! ಇಂಥಾ ಒಂದೇ ಜಾಡಿನ ಬದುಕನಾಗ ಏನು ವಿಶೇಷ ಐತಿ? ನಮಗಾದ್ರ ಬದುಕು ದಿನಾ ಹಬ್ಬ ಇದ್ದಾಂಗ. ತರಹಾವರಿ ರಾತ್ರಿಗಳು. ಇಂದಿನ ರಾತ್ರಿನಾಳಗಿಲ್ಲ, ನಾಳಿನದು ಇಂದಿಗಿಲ್ಲ, ಇಂತದ ರಾಗ ಈ ಮಕ್ಕಳು, ಮರಿ, ಲಾಲಿಹಾಡು ಯಾಕ? ಈ ಕಟಿಪಟಿ ನಮ್ಮಂತವರಿಗಲ್ಲ ಅಂತ ಅನ್ನಸ್ತು. ಮುದ್ಕೀ ನೋಡು. ಮುಂದೆ ಸುಖದ ಸಾವು ಬರ್ಲಿ ಅಂತ.

ಹುಡುಗಿ–1: ಆದ್ರೂ ನೋಡು ನಾವು ಹೀಂಗೇ ಕೊನೇವರಗೂ ಗಟ್ಟಿಮುಟ್ಟಾಗಿ ಇರ್ತೀವಿ ಅನ್ನೋದ್ ಏನ್ ಸತ್ಯ? ಮೈಕೈ ಎಲ್ಲಿಯವರೆಗೂ ಗಡಸು ಇರ್ತದೋ ಅಲ್ಲಿಯವರೆಗೂ ನಮ್ಮ ಬದುಕು. ಚರ್ಮ ಜಗ್ಗಿದ ಮ್ಯಾಲೆ, ಬೆನ್ನು ಬಾಗಿದ ಮ್ಯಾಲೆ ನಮ್ಮನ್ನು ಮೂಸೋರ್ಯಾರು? ಆಮ್ಯಾಲೆ ನಮ್ಮ ಪಾಡು ಏನು? ನಮ್ದು ಅಂತ ಒಂದು ಕೂಸಾದ್ರು ಇದ್ರೆ ಬದುಕಾಕ ಒಂದು ದಾರಿ ಆಸೆ ಇರ್ತದ. ಇಲ್ಲದ ಮ್ಯಾಲೆ ಯಾಕೆ ಬದುಕಬೇಕು ಅಂತ?''[2]

ಇಲ್ಲಿ ತಿಪ್ಪಜ್ಜಿಯ ಅನುಭವದ ಮಾತುಗಳು ವೇಶ್ಯೆಯರ ವೃತ್ತಿ ತಮ್ಮ ಬದುಕಿನ ಅನಿವಾರ್ಯತೆಯಾಗಿ ನಿರ್ವಚನೆಗೊಂಡಿದೆ. ಸಹಜ ಬದುಕಿನಲ್ಲಿ ಗಂಡ–ಮಕ್ಕಳೊಂದಿಗೆ ಬದುಕು ನಡೆಸುವ ಮಹಿಳೆಗೆ ಜೀವನದಲ್ಲಿ ಭದ್ರತೆಯಿರುತ್ತದೆ. ಎಲ್ಲಾ ಬಗೆಯ ಕಷ್ಟ–ಸುಖಗಳಿಗೆ ಬೆನ್ನಿಗಿರುವ ಗಂಡ ಜೊತೆಗಿರುತ್ತಾನೆ. ಆದರೂ ತಿಪ್ಪಜ್ಜಿಯ ಪ್ರಕಾರ ಅಂತಹ ಬದುಕು ಸ್ವಾರಸ್ಯಹೀನವಾದದ್ದು. ಭದ್ರತೆಯಿಲ್ಲದೆ ಕ್ಷಣಿಕ ಬದುಕು ನಡೆಸುತ್ತಿರುವ ವೇಶ್ಯೆಯರಿಗೆ, ಅತಂತ್ರದ ಬದುಕಿನಲ್ಲಿ ಮಕ್ಕಳನ್ನು ಪಡೆಯಬಾರದೆಂಬ ಅಭಿಪ್ರಾಯ ಅವಳದು. ಆದರೆ ಅದೇ ವೃತ್ತಿ ಮಾಡುತ್ತಿರುವ ಹುಡುಗಿಯದು ಜೀವನದ ಮೇಲಿನ ಆಸೆ ಮತ್ತು ಚೈತನ್ಯ ಕೊನೆಗಾಲದ ಆಸರೆಗಾಗಿ ಮಕ್ಕಳ ಅನಿವಾರ್ಯತೆಯನ್ನು ನೆನಪಿಸುತ್ತಾಳೆ. ಅಭದ್ರ ಬದುಕಿನಲ್ಲಿ ತಾವು ಸಂತಾನದೊಂದಿಗೆ ಬದುಕುವ ಹಂಬಲ ವ್ಯಕ್ತಪಡಿಸುವ ಹುಡುಗಿ ಬದುಕಿನ ಬಗೆಗೆ ಆತ್ಮ ವಿಶ್ವಾಸ ವ್ಯಕ್ತಪಡಿಸುತ್ತಾಳೆ. ದೈಹಿಕ ಸೌಂದರ್ಯ, ಶಕ್ತಿಯನ್ನೇ ಅವಲಂಬಿಸಿರುವ ಈ ವೃತ್ತಿ ಕೊನೆಗೆ ಕಾಲದಲ್ಲಿ ಅತಂತ್ರಕ್ಕೆ ತಳ್ಳಿಬಿಡುವ ಎಚ್ಚರಿಕೆಯನ್ನು ನೆನಪಿಸುತ್ತದೆ.

‘‘ಹುಡುಗಿ–2: ಎಲ್ಲರೂ ಬೆವರ ಸುರಿಸಿ ಸಂಜೀ ತನಕ ದುಡಿದರ ನಮ್ಮದು ಗೂಬಿ ಕೂಗೋ ಹೊತ್ತಿನಾಗ ದಂಧಿ ಆರಂಭ ಆಗ್ತದ.

ಅಜ್ಜಿ: ಸ್ವಾಮಿ ಇದು ನಮ್ಮದಾ ಬದುಕು. (ದೀರ್ಘವಾಗಿ ಉಸಿರೆಳೆದು) ಇಲ್ನೋಡಿ, ಇದು ನನ್ನ ದೇಹದ್ದೇ ಉಸಿರು (ಮೈ ಚಿಗುಟಿಕೊಂಡು) ನೋಡಿ, ನಮಗೂ ನೋವು ಆಗ್ತದ. ಅಂದ ಮ್ಯಾಲೆ ಸಾರಾಸಗಟು ನಾವು ಕೂಡ ಮನುಷ್ಯರು ಅನ್ನೋದು ಖರೇ ಅಲೇನು? ಹೀಂಗ ಒಪ್ಪಿಕೊಂಡ ಮೇಲೆ ನಮಗೂ ಮೈ ಮನಸು ಅಂಬೋದು ಇದೆ ಅಂದಾಂಗಾಯ್ತು. ಅಲ್ಲಾ ಲೋಕದಾಗ ಮಂದಿ ಬದುಕೋದು ಯಾಕೆ? ಇನ್ಯಾಕೆ, ಹೊಟ್ಟೆ ತುಂಬಿಸಾಕೆ. ಹೊಟ್ಟೆ ತುಂಬಿದ ಮ್ಯಾಲೆ ಮನಸ್ಸಿನದೇನು ಮಾಡ್ತೀರಿ. ಹೊಟ್ಟೆ ತುಂಬಿದ ಜನಾ ಮನಸ ತುಂಬಿಸಾಕ ಆಹಾರ ಹುಡುಕ್ತ್ಯಾರ. ಆ ಆಹಾರ ಅಂದರೆ ಯಾವುದು? ಅದು ನಾವೇ ಸ್ವಾಮಿ. ಅವರ ಮನಸು ಖುಷಿ ಆದರೆ ರೊಕ್ಕಾ ಕೊಡ್ತಾರೆ. ಆ ರೊಕ್ಕದಿಂದ ತಾನೇ ನಮ್ಮ ಹೊಟ್ಟೆ ತುಂಬೋದು. ನಮಗ ಮನಸು ಐತೆ ಅಂಬೋದೇ ಈ ಹೊಟ್ಟೆ ತುಂಬೋ ಭರಾಟೇಲಿ ಮರ್ತೇ ಹೊಗೈತ್ರಿ.''[3]

ವೇಶ್ಯೆಯರ ಬದುಕಿನ ಸ್ವರೂಪವನ್ನು ಈ ಮೇಲಿನ ಸಂಭಾಷಣೆಗಳಲ್ಲಿ ಗುರುತಿಸಬಹುದು. ವೇಶ್ಯೆಯರ ಬದುಕಿನ ಅಸ್ತಿತ್ವದ ಬಗೆಗಿನ ತಿಪ್ಪಜ್ಜಿಯ ಮಾತುಗಳು ಅವರು

ಸಹ ಮನುಷ್ಯರಾಗಿ ಎದುರಿಸುತ್ತಿರುವ ಜೀವನದ ಸಂಕಟಗಳ ಬಗೆಗೆ, ಕಳೆದುಕೊಂಡಿರುವ ಸುಂದರ ಬದುಕಿನ ಕ್ಷಣಗಳ ಬಗೆಗೆ ಸೂಕ್ಷ್ಮವಾಗಿ ಪ್ರಸ್ತಾಪಿಸುತ್ತಿದ್ದಾರೆ. ಅವರಿಂದ ಕೇವಲ ಕಾಮದಾಹ ತೀರಿಸಿಕೊಳ್ಳಲು ದೇಹವನ್ನು ಬಯಸಿ ಬರುವ ಪುರುಷರು ಅವರ ಮನಸ್ಸಿನ ಒಳಗನ್ನು ಅರ್ಥೈಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗುವುದಿಲ್ಲ. ಮಹಿಳೆಯನ್ನು ಕಾಮತೃಷೆ ತೀರಿಸುವ ಯಂತ್ರಗಳಂತೆ ಭಾವಿಸುವ ಪುರುಷ ಪ್ರಧಾನ ಸಮಾಜದ ನಡತೆಯನ್ನು ಪರಿಚಯಿಸುತ್ತಿದೆ. ತಿಪ್ಪಜ್ಜಿ ಹೇಳುವ 'ಹೊಟ್ಟೆ ತುಂಬಿದ ಜನಾಮನಸ ತುಂಬಿಸಾಕ ಆಹಾರ ಹುಡುಕ್ತಾರ, ಆ ಆಹಾರ ಯಾವುದು? ಅದು ನಾವೇ ಸ್ವಾಮಿ.' ಎನ್ನುವ ಮಾತುಗಳು ಉಳ್ಳವರ ಭೋಗಲಾಲಸೆಗೆ ಮಹಿಳಾ ಸಮುದಾಯ ಬಳಕೆಯಾಗುತ್ತಿರುವ ಬಗೆಯನ್ನು ನೆನಪಿಸುತ್ತದೆ. ವೇಶ್ಯೆಯಂತಹ ವೃತ್ತಿಯನ್ನು ಸೃಷ್ಟಿಸಿರುವ ಪುರುಷ ಪ್ರಧಾನ ಸಮಾಜ ಅವರು ಬದುಕು ಸಾಗಿಸಲು, ಹೊಟ್ಟೆಪಾಡಿಗಾಗಿ ಕೊನೆಗಾಲದವರೆಗೆ ಕಾಮುಕರನ್ನು ತಲೆಹಿಡುಕರನ್ನು ಆಶ್ರಯಿಸಬೇಕಾದ ಶೋಚನೀಯ ಸ್ಥಿತಿಯನ್ನು ಅನಾವರಣಗೊಳಿಸುತ್ತದೆ. ಕನ್ನಡ ನಾಟಕಕಾರ್ತಿಯರು ಪುರುಷ ಪ್ರಧಾನ ವ್ಯವಸ್ಥೆಯು ಮಹಿಳೆಯನ್ನು ತನ್ನ ಲೈಂಗಿಕ ಕಾಮನೆಗಳಿಗೆ ಬಳಸಿಕೊಳ್ಳಲು ಮಾಡಿದ ಹುನ್ನಾರಗಳ ಬಗೆಗೆ ಸೂಕ್ಷ್ಮವಾಗಿ ವಿವರಿಸುತ್ತಾರೆ. ಪುರುಷ ಪ್ರಧಾನ ಸಮಾಜವೂ ತಾನೇ ಮಾಡಿದ ನೀಚ ವ್ಯವಸ್ಥೆಗೆ ಮಹಿಳೆಯರನ್ನು ಹೊಣೆಯಾಗಿಸಿರುವ ಕುತಂತ್ರವನ್ನು ಗುರುತಿಸಬಹುದು. ತನ್ನದಲ್ಲದ ತಪ್ಪಿಗಾಗಿ ಮಹಿಳಾ ಸಮುದಾಯ ವೇಶ್ಯೆ ಹೆಸರಿನಲ್ಲಿ ಬದುಕಿನದ್ದಕ್ಕೂ ಅವಮಾನಕ್ಕೆ ಒಳಗಾಗುವ ಲೈಂಗಿಕ, ದೈಹಿಕ, ಸಾಮಾಜಿಕ ಶೋಷಣೆಗಳಿಗೆ ನಿರಂತರವಾಗಿ ಒಳಪಡುವುದನ್ನು ಕಾಣಬಹುದು. ಪುರುಷ ನಿರ್ಮಿತ ಈ ವ್ಯವಸ್ಥೆಯಿಂದ ಬಿಡಿಸಿಕೊಳ್ಳಲಾಗದ ಸಂದರ್ಭದಲ್ಲಿ ಅದೇ ವೃತ್ತಿಯನ್ನು ಬದುಕಿನ ಭಾಗವಾಗಿಸಿಕೊಳ್ಳುವ ಅನಿವಾರ್ಯತೆಯನ್ನು ನಾಟಕಗಳು ವಾಸ್ತವಿಕ ನೆಲೆಯಲ್ಲಿ ಚರ್ಚಿಸಿದೆ. ಸಮಕಾಲೀನ ಸಂದರ್ಭದಲ್ಲಿ ಸಾಮಾಜಿಕ ವ್ಯವಸ್ಥೆಲ್ಲಿಯೂ ಅವರು ಶೋಷಿತರಾಗಿಯೇ ನಿರಂತರವಾಗಿ ಅವಮಾನಕ್ಕೊಳಗಾಗುತ್ತಿರುವುದು ದುರಂತವೇ ಸರಿ.

**ಮಹಿಳಾ ಮಾರಾಟ:**

ಭಾರತೀಯ ಸಂವಿಧಾನದ ಪ್ರಕಾರ ಮಾನವರ ಮಾರಾಟ ಅಥವಾ ಸಾಗಾಣಿಕೆ ಎಂಬುದು ಅಪರಾಧ. ದೇಶದ ಸಾಮಾಜಿಕ ಪಿಡುಗಾಗಿ ಕಾಡುತ್ತಿರುವ ಮಹಿಳಾ ಮಾರಾಟದ ಸಂಗತಿ ಇತ್ತೀಚಿನ ದಶಕಗಳ ಸಂದರ್ಭಗಳಲ್ಲಿ ಹೆಚ್ಚು ನಡೆಯುತ್ತಿದೆ. ಮಹಿಳಾ ಸಾಗಾಣಿಕೆ, ಮಾರಾಟ ಎಂಬುದು ಬೇರೆ-ಬೇರೆ ಸ್ವರೂಪದಲ್ಲಿರುತ್ತದೆ. ಜಾಗತೀಕರಣದಿಂದ ಸೃಷ್ಟಿ ಗೊಂಡ ಹಣದಾಹ, ಲೈವಿಂಕ ವಿಕೃತತೆಗಳಂತಹ ಅನೇಕ ಕಾರಣಗಳು ಹಿಂದೆಂದಿಗಿಂತಲೂ ಹೆಚ್ಚು ಮಹಿಳೆಯನ್ನು ಮಾರಾಟದ ವಸ್ತುವಾಗಿ ಕಂಡಿದೆ. ತಮ್ಮ ಮನೆಯವರು, ನೆರೆಹೊರೆಯವರು, ಪರಿಚಯಸ್ಥರು ಕೆಲಸ, ವಿವಾಹ, ಪ್ರೀತಿಗಳಂತಹ ಹೆಸರಿನಲ್ಲಿ ಮಹಿಳೆಯನ್ನು ನಂಬಿಸಿ ಮಾರಾಟ ಮಾಡುವ ಅನೇಕ ನಿದರ್ಶನಗಳನ್ನು ಕಾಣಬಹುದಾಗಿದೆ. ಕಾಲಕಳೆದಂತೆ ಮಹಿಳಾ ಮಾರಾಟ ಎಂಬುದು ಅಂತರಾಷ್ಟ್ರೀಯ ಮಟ್ಟದ ದುಷ್ಟ ಜಾಲವಾಗಿ ರೂಪುಗೊಂಡಿದೆ. ಮಹಿಳೆಯನ್ನು ನಂಬಿಸಿ ಅಥವಾ ಅಪಹರಿಸಿ ಭಿಕ್ಷಾಟನೆಗೆ ಹಚ್ಚುವ, ವೇಶ್ಯಾವಾಟಿಕೆಗಳ ಮೂಲಕ ಲೈಂಗಿಕ ದೌರ್ಜನ್ಯಗಳಿಗೆ ಒಳಪಡಿಸುವ ಅನೇಕ ಉದಾಹರಣೆಗಳು ದಿನನಿತ್ಯ ಮಾಧ್ಯಮಗಳಲ್ಲಿ ವರದಿಯಾಗುತ್ತಿವೆ. ಆರ್ಥಿಕವಾಗಿ ದುರ್ಬಲರಾಗಿರುವ ಕುಟುಂಬಗಳ ಮಹಿಳೆಯರು ಇಂತಹ ದುಷ್ಟ ಜಾಲಗಳಲ್ಲಿ ಸಿಕ್ಕಿ ಹಾಕಿಕೊಳ್ಳುತ್ತಾರೆ. ಸಬಲ ಬದುಕಿನ ಆಸೆಯಿಂದ ತಲೆಹಿಡುಕರ ಕುತಂತ್ರಕ್ಕೆ ಬಲಿಯಾಗಿ ತಮ್ಮ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುವ ಅನೇಕ ಸಂಗತಿಗಳು ಸಮಾಜದಲ್ಲಿ ನಡೆಯುತ್ತಿವೆ. ಮಹಿಳಾ ಮಾರಾಟದ ನಂತರ ಅವರ

ಮೇಲಾಗುವ ಲೈಂಗಿಕ ಶೋಷಣೆ ಜೀತದಾಳಾಗಿ ಅಂಗಾಂಗಗಳನ್ನು ಕಳೆದುಕೊಂಡು ನಿರಂತರವಾಗಿ ಶೋಚನೀಯ ಸ್ಥಿತಿಯಲ್ಲಿ ಬದುಕುವ ಅಥವಾ ಅನೇಕ ಬಾರಿ ಪ್ರಾಣ ಕಳೆದುಕೊಳ್ಳುವ ಸಾಧ್ಯತೆಗಳು ಹೆಚ್ಚು. ಜೀತ ಕಾರ್ಮಿಕಳಾಗಿ ಒತ್ತಾಯಪೂರ್ವಕ ಭಿಕ್ಷಾಟನೆಗಾಗಿ, ಲೈಂಗಿಕ ದುರ್ಬಳಕೆಗಾಗಿ ಮಹಿಳೆಯನ್ನು ಕಳ್ಳ ಸಾಗಾಣಿಕೆ ಮಾಡುವ ಮನಸ್ಥಿತಿಗಳಿಗೆ ಇರುವ ಹಣದಾಹ, ಅಮಾನವೀಯತೆ. ಸಮಾಜದ ಸ್ವಾಸ್ಥ್ಯಕ್ಕೆ ಮಾರಕವಾದ ಗೌರವಯುತವಾಗಿ ಬದುಕ ಬೇಕಾದ ಮಹಿಳೆಯನ್ನು ಮಾರಾಟದ ಸರಕಾಗಿ ಭಾವಿಸುವ ಪುರುಷ ಪ್ರಧಾನ ಮನಸ್ಥಿತಿಯನ್ನು ಕನ್ನಡ ನಾಟಕಕಾರ್ತಿಯರು ಮುಖಾಮುಖಿಗೊಂಡಿದ್ದಾರೆ. ಈ ವಸ್ತು ಸಂಗತಿಯನ್ನು ತಮ್ಮ ನಾಟಕಗಳಲ್ಲಿ ಚರ್ಚಿಸಿದ್ದು, ಈ ನೆಲೆಯಲ್ಲಿ ಸರಿತಾ ಅನಂತ ಕುಲಕರ್ಣಿ ಅವರ 'ಹೆತ್ತವ್ವ ಹರಕೆ ಬೇಡ್ಯಾಳೇ', ಶಕುಂತಳಾ ಭಟ್ಟ ಅವರ 'ಮಂಜು ಸರಿಯಿತು' ಮತ್ತು ಜಯಶ್ರೀ ಕಂಬಾರ ಅವರ 'ಮಾಧವಿ' ನಾಟಕಗಳು ಪ್ರಮುಖವಾಗಿವೆ.

ಸಂಪ್ರದಾಯದ ಹೆಸರಿನಲ್ಲಿ ದಲಿತ ಮಹಿಳೆಯನ್ನು ಶೋಷಿಸುವ ಪೌರೋಹಿತ್ಯಶಾಹಿ ಮತ್ತು ಜಮೀನ್ದಾರಿ ವ್ಯವಸ್ಥೆಯ ಕುತಂತ್ರದ ಹಲವು ಮುಖಗಳನ್ನು ಸರಿತಾ ಅನಂತ ಕುಲಕರ್ಣಿಯವರ 'ಹೆತ್ತವ್ವ ಹರಕೆ ಬೇಡ್ಯಾಳೇ' ನಾಟಕ ಮಾರ್ಮಿಕವಾಗಿ ಚರ್ಚಿಸಿದೆ. ತಳಸಮುದಾಯ ಅನಕ್ಷರತೆ, ಅಸಹಾಯಕತೆ, ಬಡತನವನ್ನೇ ಬಂಡವಾಳವಾಗಿಸಿಕೊಂಡು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳು ಶೋಷಕ ವ್ಯವಸ್ಥೆಗಳ ಅನಾವರಣವನ್ನು ಈ ನಾಟಕದಲ್ಲಿ ಕಾಣಬಹುದು. ದೇವರು, ಧಾರ್ಮಿಕ ನಂಬಿಕೆ, ಹರಕೆ ಹೆಸರಿನಲ್ಲಿ ಸಣ್ಣ ವಯಸ್ಸಿನ ಯುವತಿಯರನ್ನು ಲೈಂಗಿಕ ಕಾಮದಾಸೆ ಬಳಸಿಕೊಳ್ಳುವ ಪೌರೋಹಿತ್ಯಶಾಹಿ ಮತ್ತು ಜಮೀನ್ದಾರಿ ವ್ಯವಸ್ಥೆ ಕ್ರೌರ್ಯ ಮೆರೆಯುತ್ತವೆ. ತಳಸಮುದಾಯದ ಬಡತನ ದೌರ್ಬಲ್ಯವನ್ನೇ ಅವಕಾಶವಾಗಿಸಿಕೊಂಡು ಆ ಸಮುದಾಯದ ಯುವತಿಯರನ್ನು ದೇವರ ಹೆಸರಿನಲ್ಲಿ ಭೋಗಿಸುವುದು ಅಷ್ಟೇ ಅಲ್ಲದೇ ಅವರನ್ನು ವಸ್ತುವಿನಂತೆ ಮಾರಾಟ ಮಾಡುವುದನ್ನು ಕಾಣಬಹುದು. ಪೌರೋಹಿತ್ಯಶಾಹಿ ವ್ಯವಸ್ಥೆಯ ಪ್ರತಿನಿಧಿಯಾದ ಪೂಜಾರಿಯ ಯುವತಿಯರನ್ನು ಮತ್ತೊಬ್ಬರಿಗೆ ತಲೆಹಿಡಿಯುವ ಮಾರಾಟ ಮಾಡುವ ಸಂದರ್ಭ ನಾಟಕದಲ್ಲಿ ಆವರಿಗೂ ದೇವರ ಸೇವೆಯ ಹೆಸರಿನಲ್ಲಿ ದಾಸಿಯರನ್ನಾಗಿ ಬಿಟ್ಟಿದ್ದ ಯುವತಿಯರನ್ನು ಅನ್ವರ ಎಂಬ ದಲ್ಲಾಳಿಗೆ ಹಣದಾಸೆಗೆ ಮಾರುವ ಕೆಲಸವನ್ನು ಪೂಜಾರಿ ಮಾಡಿರುತ್ತಾನೆ. ದೇವದಾಸಿಯಾಗಿ ಬಿಟ್ಟ ಚಂದ್ರಿಯನ್ನು ಅನ್ವರಗೆ ಮಾರಾಟ ಮಾಡುವ ಸಂದರ್ಭ ಅನೇಕ ವಿಚಾರಗಳನ್ನು ಅನಾವರಣಗೊಳಿಸುತ್ತದೆ. ದಂಧೆಗೆಂದು ಪೂಜಾರಿಯ ಹತ್ತಿರ ಬಂದ ಅನ್ವರ ಚಂದ್ರಿಯನ್ನು ನೋಡಿ ಪೂಜಾರಿಯೊಂದಿಗೆ ವ್ಯಾಪಾರಕ್ಕಿಳಿಯುತ್ತಾನೆ.

''ಪೂಜಾರಿ: ಯಾರು? (ಅನ್ವರನನ್ನು ನೋಡಿ) ಅರೇ ಅನ್ವರಬಾಯಿ ಬನ್ರಿಬನ್ರಿ ಭಾಳ ದಿವಸಕ್ಕ ಬಂದ್ರಿ, ಆರಾಮ ಅದೀರಲ್ಲಾ ಮುಂಬೈ ಹವಾ ಪಾಣಿ ಹ್ಯಾಂಗೈತಿ?

ಅನ್ವರ: ಹವಾಪಾಣಿ ಆಮ್ಯಾಗ ಹೇಳ್ತೀನಿ. ಮೊದಲ್ ಆ ಛೋಕರಿ ಯಾರು ಹೇಳ. ಭಾರಿ ಮಸ್ತಮಾಲ್ ಕಿತನೆ ಬಾರ್ ಇಧರ್ ಆಯಾ. ಲೇಕಿನ್ ಇಂಥಾ ಮಾಲ್ ಆಂಬಸ ನೋಡಿಲ್ಲ. ಪೂಜಾರಪ್ಪಾ ಈ ಮಾಲ್ ನನಗ ಭಾಳ ಪಸಂದ ಬಂದೈತಿ ನನಕೂಟ ಹಚಕೊಟ್ಬಿಡ.

ಪೂಜಾರಿ: ನಿಮಗೇನೋ ಆಕಿ ಪಸಂದ ಆದಾಳು. ಆದರ ಆಕೀಗೆ ನೀವು ಪಸಂದ ಆಗಬೇಕಲ್ಲಾ (ನಗುವನು)

ಅನ್ವರ: ಸುಮಾಕ ಮಜಾಕ ಮಾಡಬ್ಯಾಡ. ನನಗ ಆ ಮಾಲ್ ಬೇಕ ಬೇಕು ಲಗೂನ

ದಾಮ ಹೇಳ. ಎಣಿಸಿ ಜಾಗಾನ ಬಿಡ್ತೀನಿ.

ಪೂಜಾರಿ: ಹಿಂದಿಲ್ಲಾ ಮುಂದಿಲ್ಲಾ. ಅಕೀ ಯಾರ ಅಂತ ಸುದ್ದಾ ನಿಮಗೂ ರೂಖಿಲ್ಲ. ಒಮ್ಮಾಕಲೇ ದಾಮಿಗೆ ಬಂದ್ರೆಲ್ಲಾ. ನೀವು ಕೇಳಿದಿರಿ ಅಂತ ಹೇಳ್ತಿನೂ. 25000 ರೂಪಾಯಿಗೆ ಒಂದ ಪೈಸೆ ಕಮ್ ಇಲ್ಲಾ.

ಅನ್ವರ: ಪಚಾಸ ಹಜಾರ ಯಾಕ ದಂಧಾ ಕರನೇಕಾ ಹೈಕಿ ನಹಿಂ?

ಪೂಜಾರಿ: ರೊಕ್ಕದ ಮಾರಿ ನೋಡಬ್ಯಾಡ್ರಿ. ಮಾಲ್ಯಾಂಗ ಅದ ನವೀನ ಕೋರಾ...

ಅನ್ವರ: (ನಗುತ್ತ) ನವೀನ ಕೋರಾ? ನನಗ ಹೇಳ್ತೀ?

ಪೂಜಾರಿ: (ತಡವರಿಸುತ್ತ) ಥ್ವಾಡೆ ಹಳೇ ದಾಗ್ಯೆತಿ

ಅನ್ವರ: ನೀ ಕಿತನಿ ಬಾರ?

ಪೂಜಾರಿ: ಏ ಥೊಡೋ ಥೊಡೋ (ನಾಚುವನು)

ಅನ್ವರ: ಜಾನೇದೋ ದಂಧಾದು ಬಾತ್ ಕರೋ.

ಪೂಜಾರಿ: ಹೇಳಿದೆನಲ್ರೀ 25000 ಬೇಕೇ ಬೇಕು. ಅದರಾಗಿನ ಅರ್ಧಾನಾ ಇನಾಮದಾರಗ ಕೊಡಬೇಕು.

ಅನ್ವರ: ಬೀಚಮೆ ಈ ಇನಾಮದಾರ ಎಲ್ಲಿಂದ ಬಂದ? ಅವಗ ಕ್ಯೊಂ?

ಪೂಜಾರಿ: ಯಾಕ ಅಂದ್ರ ಈ ಗುಡಿ ಅವಂದು. ಅವಾ ಈ ಗುಡಿ ಬಂದ ಮಾಡಿದಾ ಅಂದರೆ ಪೂಜಾ ನಿಂತ ಹೋಗ್ತೈತಿ ಪೂಜಾ ನಿಂತ್ರ ಹರಕಿ ಸಲ್ಲಿಸುವವರು ಯಾರು? ಹುಡುಗ್ಯಾರ್ನ ಬಿಡವರು ಯಾರು? ಮತ್ತ ಹುಡುಗ್ಯಾರೇ ಇಲ್ಲಿ ಅಂದಮ್ಯಾಲೆ ನಿಮ್ಮಂಥವರ ದಂಧಾ ಹ್ಯಾಂಗ?

ಅನ್ವರ: ನಮಗ ಯಾರ ಆದರ ಯಾನು? ನಿಮ್ಮಂಥ ಶರೀಫ ಲೋಗೊಂಕಿ ಬಹೂ ಇರ್ತಾರಲ್ಲಾ!

ಪೂಜಾರಿ: (ಸಿಟ್ಟಿನಿಂದ) ಏನ ಮಾತಾಡ್ತೀರಿ, ಖಬರ ಐತಿ ಏನು ? ನಮ್ಮ ಹೆಂಡ್ರುಮಕ್ಕಳ ಖಬರ ನಿಮಗ್ಯಾಕ? ನೀವು ಬರೇ ನಿಮ್ಮ ದಂಧದಷ್ಟ ಮಾತಾಡ್ರಿ.

ಅನ್ವರ: ಬ್ಯಾರೆ ಖಬರ ನನಗರೆ ಯಾಕ ಬೇಕು? ನಾ ಹೇಳಿದ ಕಾಮ್ ಆದ್ರಬಸ್. ಕರೀ ಆ ಛೋಕ್ರಿನ.

ಪೂಜಾರಿ: ಚಂದ್ರವ್ವಾ ಚಂದ್ರವ್ವಾ (ಜೋರಾಗಿ ಕರೆಯುವನು)

ಚಂದ್ರಿ: ಯಾನ ಪೂಜಾರಪ್ಪಾ ?

ಪೂಜಾರಿ: ಮುಂಬೈಯಿಂದ ಪಾಹುಣೆ ಬಂದಾರ ನಿನ್ನ ಕೇಳಾಕ ಹತ್ಯಾರ ಬಾ

ಚಂದ್ರಿ: (ಅನ್ವರನತ್ತ ನೋಡುತ್ತ) ನಿಮ್ಮ ಪೈಕೀ ಅಂತ ನೋಡೋಣ ಗೊತ್ತಾತು.

ಪೂಜಾರಿ: ಚಂದ್ರವ್ವಾ ನೀ ಅವರಿಗೆ ಭಾಳ ಸೇರಿ ಅಂತ. ನೀ ಹೂಂ ಅಂದರ ನಿನ್ನ ಮದಿವಿ ಮಾಡಿಕೊಂಡು ಕರಕೊಂಡು ಹೊಕ್ಕಾರಂತ.

ಚಂದ್ರಿ: (ವ್ಯಂಗ್ಯವಾಗಿ) ನನ್ನ... ಮದುವಿ ಮಾಡ್ಕೊಂತಾರಂತ? ಯಾಕ ಫರಾಸ ಪ್ಯಾಟ್ಯಾಗ ಕುಂಡ್ರಸಾಕ ಏನು? ಮದವಿ ಅಂತ ಮದವಿ...

ಪೂಜಾರಿ: ಸುಳ್ಳಲ್ಲ ಚಂದ್ರಿವಾ. ಖರೇ ಅಂದ್ರೂಮದವಿ ಮಾಡ್ಕೊಂತಾರಂತ. ನೀನು

ಅವರಿಗೆ ಭಾಳ ಪಸಂದ ಬಂದೀ ಅಂತ.

ಚಂದ್ರಿ: ಅವರಿಗೆ ನಾ ಪಸಂದ ಅಂದ್ರೆ, ಅವರು ನನಗ ಪಸಂದ ಬರಬೇಕಲ್ಲಾ?

ಪೂಜಾರಿ: ಅತೀ ಆತಲ್ಲಾ ನಿಂದೂ, ನಿನ್ನಂಥಾ ಉಂಡು ಉಗೇದ ಎಲೀಗೆ ರಾಜಕುಮಾರ ಬರಾಮ ಇದಾನೇನು?"[4] ಎಂದು ಪೂಜಾರಿ ಕೀಳಾಗಿ ವ್ಯಂಗ್ಯವಾಡುತ್ತಾನೆ.

ಈ ಮೇಲೆ ನಡೆಯುತ್ತಿರುವ ಸಂಭಾಷಣೆಗಳು ಬಹು ಕಾಲದಿಂದ ಪೂಜಾರಿ, ಜಮೀನ್ದಾರನಾದ ಇನಾಮ್ದಾರ ಇಬ್ಬರು ಅನ್ವರನೊಂದಿಗೆ ಯುವತಿಯರನ್ನು ಮುಂಬೈಗೆ ಮಾರಾಟ ಮಾಡುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ಚಂದ್ರಿ ಒಂದು ಮಾಲ್ ಆಗಿ ಅನ್ವರನಿಗೆ ಕಾಣಿಸಿದರೆ ಪೂಜಾರಿಗೆ ಹಣಮಾಡುವ ವಸ್ತುವಾಗಿದ್ದಾಳೆ. ಇಲ್ಲಿ ಇಬ್ಬರೂ ಹಣದ ಚೌಕಾಸಿ ಮಾಡುವುದು ಪ್ರಾಣಿಗಳ ವ್ಯಾಪಾರವನ್ನು ನೆನಪಿಸುತ್ತದೆ. ದೇವದಾಸಿ ಪದ್ಧತಿಯಿಲ್ಲದಿದ್ದರೆ ಹೆಣ್ಣನ್ನು ಮಾರಾಟ ಮಾಡುವುದು, ವ್ಯಾಪಾರ ಹೇಗೆ ಎಂಬ ಪೂಜಾರಿಯ ಮಾತಿಗೆ ಅವನ ಹೆಂಡತಿಯ ಬಗೆಗೆ ಅನ್ವರ ಆಡುವ ಮಾತುಗಳು ಲಾಭಕೋರತನಕ್ಕೆ, ತಲೆಹಿಡುಕತನಕ್ಕೆ ಇರುವ ಕ್ರೂರತೆಯನ್ನು ತೋರಿಸಿದರೆ ಅದು ಪೂಜಾರಿಗೆ ತನ್ನ ಮನೆಯ ಗೌರವವಾಗಿ ಕಾಣಿಸುತ್ತದೆ. ತನ್ನ ಮನೆಯ ಹೆಣ್ಣಿನ ಬಗೆಗಿನ ಅನ್ವರನ ಅಭಿಪ್ರಾಯ ಪೂಜಾರಿಗೆ ಕೋಪ ತರಿಸುತ್ತದೆ. ಬಹುಕಾಲದಿಂದ ಮಹಿಳೆಯರ ಅಸಹಾಯಕತೆ, ಬಡತನದ ಅವಕಾಶವನ್ನೇ ಬಳಸಿಕೊಂಡು ಮದುವೆ, ಕೆಲಸ, ಬೇರೆ ಭದ್ರತೆಯ ಹೆಸರಿನಲ್ಲಿ ಮಹಿಳೆಯರನ್ನು ವಂಚಿಸಿ ವೇಶ್ಯಾವಾಟಿಕೆಗೆ ದೂಡುವ ಕುತಂತ್ರವನ್ನು ವಾಸ್ತವಿಕ ನೆಲೆಯಲ್ಲಿ ಪ್ರಸ್ತುತ ನಾಟಕದಲ್ಲಿ ಚರ್ಚಿಸಲಾಗಿದೆ. ಶಕುಂತಳಾ ಭಟ್ ಅವರ 'ಮಂಜು ಸರಿಯಿತು' ನಾಟಕ ಅನೇಕ ವಿಚಾರಗಳನ್ನು ಒಂದೇ ಪರಿಧಿಯಲ್ಲಿ ಚರ್ಚಿಸುತ್ತದೆ. ಅದರಲ್ಲಿ ಮಹಿಳಾ ಮಾರಾಟದ ಸಂಗತಿಯನ್ನು ವಾಸ್ತವಿಕ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಶಿಕ್ಷಿತಳಾದ ಸುಮಾ ಮನೆಯವರು ಬಲವಂತಕ್ಕೆ ಶ್ರೀಮಂತ ಮನೆಯ ಸೊಸೆಯಾಗುತ್ತಾಳೆ. ಮನುಷ್ಯ ಸಂಬಂಧಗಳ ಪರಿಚಯವೇ ಇಲ್ಲದಂತಹ ಗಂಡ ರಾಜಶೇಖರನಿಂದ ಯಾವುದೇ ಪ್ರೀತಿಯನ್ನು ಬಯಸದಂತಹ ಪರಿಸ್ಥಿತಿಯನ್ನು ಎದುರಿಸುವ ಸುಮಾ ಮಾನಸಿಕ ಹಿಂಸೆಗೆ ಒಳಗಾಗುತ್ತಾಳೆ. ಊಟ, ನೀರು, ನಿದ್ರೆಬಿಟ್ಟು ಚಿಂತೆಗೊಳಗಾಗುತ್ತಾಳೆ. ಆದರೆ ಸುಮಾಳ ತವರು ಮನೆಯಲ್ಲಿ ಶ್ರೀಮಂತ ಮನೆಗೆ ಸೊಸೆಯಾಗಿ ಸುಖವಾಗಿದ್ದಾಳೆ. ಎಂಬ ನಂಬಿಕೆಯಲ್ಲಿರುತ್ತಾರೆ. ಮನೆ ಕೆಲಸದವಳಾದ ರಂಗಮ್ಮ ಲೀಲಾಮ್ಮ ವೇಶ್ಯಾವಾಟಿಕೆಗೆ ಮಹಿಳೆಯರನ್ನು ಸಾಗಿಸುವ ಗುಂಪಿನಲ್ಲಿ ಸಿಕ್ಕಿಕೊಂಡಿರುವ ವಿಚಾರವನ್ನು ತಿಳಿಸುತ್ತಾಳೆ. ಈಗಾಗಲೇ ರಂಗಮ್ಮ ಸ್ವತಃ ತನ್ನ ಮಗಳನ್ನೇ ಈ ಗುಂಪಿನವರಿಂದ ಉಳಿಸಿಕೊಳ್ಳದೇ ಕಳೆದುಕೊಂಡ ದುರಂತದ ಕಥೆಯನ್ನು ವಿವರಿಸುತ್ತಾಳೆ. ರಾಜಶೇಖರ, ಆನಂದ, ಲೀಲಾ ಎಲ್ಲರೂ ತಲೆಹಿಂಡುಕರೆಂಬ ವಿಷಯವನ್ನು ಸುಮಾಳಿಗೆ ತಿಳಿಸುತ್ತಾಳೆ.

"ರಂಗಿ: ನಿಮಗೆ ಸುಳ್ಳು ಹೇಳಿ ನಾನ್ಯಾವ ನರಕಕ್ಕೆ ಹೋಗ್ಲಿ? ಈ ಲೀಲಮ್ಮನವರ ವ್ಯವಹಾರ ಏನಂತ ಗೊತ್ತಾಗುವುದಿಲ್ಲ. ದೊಡ್ಡ ದೊಡ್ಡ ಜನರ ಪರಿಚಯವಿದೆ. ಆನಂದಣ್ಣ ಅವರ ಗಂಡ ಅಲ್ಲ. ಚಿಕ್ಕ ಧನಿಗಳಿಗೆ ನೀವು ಮೊದಲನೇ ಹೆಂಡ್ತಿಯು ಅಲ್ಲ.

ಸುಮ: ಏನಂದೆ? ನಿನ್ನ ಮಾತನ್ನು ನಂಬಲು ಸಾಧ್ಯವೇ ಇಲ್ಲವಲ್ಲಾ !

ರಂಗಿ: ನಿಮಗೆ ಈ ಸತ್ಯ ಇವತ್ತಲ್ಲದಿದ್ದರೆ ನಾಳೆ ಗೊತ್ತಾಗುತ್ತೆ. ಹಳ್ಳಿ-ಕೊಂಪೆಯಲ್ಲಿ ಸುತ್ತಾಡಿ ಚೆಂದುಳ್ಳಿ ಚೆಲುವೆಯರನ್ನು ಮದುವೆಯಾಗುವುದು... ಮತ್ತೆ ಅರಬ್ಬರಿಗೆ ಮಾರುವುದು. ಇದೇ ಇವರ ಮುಖ್ಯ ಕಸುಬು. ಈ ವ್ಯವಹಾರದಲ್ಲಿ ತುಂಬಾ ಜನರಿದ್ದಾರಂತೆ.

ಸುಮ: ದೇವರೇ ನನ್ನ ಗಂಡ ಇಂಥ ಕಸುಬಿನವನೇ !

ರಂಗಮ್ಮ: ನಿಮ್ಮ ಗಂಡ ದೇವರಂಥವರು. ಅವರು ಹಿಂದೆ ಬ್ಯಾಂಕಿನಲ್ಲಿದ್ದರಂತೆ. ಅವರ ಚೆಲುವು ಲೀಲಾಳ ಕಣ್ಣು ಕುಕ್ಕಿತಂತೆ. ಅವನನ್ನು ತನ್ನ ಬಲೆಗೆ ಬೀಳಿಸಲು ಏನೇನೋ ಪ್ರಯತ್ನ ಮಾಡಿದಳಂತೆ. ಮತ್ತೊಂದು ದಿನ ಅವನನ್ನು ಕೊಲೆ ಕೇಸಿನಲ್ಲಿ ಸಿಲುಕಿಸಿ ಅವನನ್ನು ತನ್ನ ಮುಷ್ಠಿಯಲ್ಲಿರಿಸಿಕೊಂಡಿದ್ದಾಳೆ ಈ ಮಾಯಾವಿ.

ಸುಮ: ಈ ವಿಷಯ ಆನಂದ್‌ಗೆ ಗೊತ್ತಿಲ್ಲವೇ?

ರಂಗಮ್ಮ: ಗೊತ್ತಿದ್ರೂ ಏನ್ಮಾಡೋದಮ್ಮ... ಹಣದ ಮುಂದೆ ಯಾವುದೂ ಅಲ್ಲ. ನಿಮ್ಮ ಗಂಡನಿಗೆ... ಲೀಲಾಳಿಗೆ ಸಂಬಂಧವಿದೆ. ಬೇಕಿದ್ರೆ ಪರೀಕ್ಷೆ ಮಾಡಿ ನೋಡಿ...

ಸುಮ: ರಂಗಮ್ಮ! ಮೊಸರಾದ ಹಾಲನ್ನು ಮತ್ತೆ ಹಾಲು ಮಾಡಲು ಸಾಧ್ಯವೇ?

ರಂಗಿ: ಅಮ್ಮಾ... ಆ ಲೀಲಾ ಅತಿಕಾಮಿ. ಅವಳಿಗೆ ಹಣದ ಪಿಶಾಚಿಯೂ ಹಿಡಿದಿದೆ. ನಿಮ್ಮನ್ನು ಆ ಕೊಲ್ಲಿ ರಾಷ್ಟ್ರಕ್ಕೆ ಮಾರುವ ಮುನ್ನ... ಮೊದಲು ಈ ನರಕದಿಂದ ಪಾರಾಗಿ...

ಸುಮ: ಹೇಗೆ ರಂಗಮ್ಮ... ಇಲ್ಲಿ ಸರ್ಪ ಕಾವಲಿದೆ ಅಂತಿಯಾ...

ರಂಗಮ್ಮ: ಸರ್ಪಕಾವಲು ಇಲ್ಲದಿರುತ್ತಿದ್ದರೆ ಇಲ್ಲಿ ನೂರಾರು ಹೆಣ್ಣು ಮಕ್ಕಳ ಮಾನಾಪಹರಣ ಆಗುತ್ತಿರುವಾಗ ನಾನು ಸುಮ್ಮನಿರುತ್ತಿದ್ದೆನಾ"[5] ರಂಗಮ್ಮಳ ಎಲ್ಲಾ ಮಾತುಗಳನ್ನು ಕೇಳಿದ ನಂತರ ಸುಮಾ ತಾನೊಂದು ದೊಡ್ಡ ಮೋಸದ ಜಾಲದಲ್ಲಿ ಸಿಕ್ಕಿ ಹಾಕಿಕೊಂಡಿರುವುದು ಅರಿವಿಗೆ ಬರುತ್ತದೆ. ಮಹಿಳಾ ಮಾರಾಟದ ಜಾಲವನ್ನು ಪೊಲೀಸರಿಗೆ ಹಿಡಿದು ಕೊಡುವುದರ ಮೂಲಕ ಬುದ್ಧಿ ಕಲಿಸುತ್ತಾಳೆ. ಪ್ರಸ್ತುತ ಸಂದರ್ಭದಲ್ಲಿ ತಮ್ಮದೇ ಖರ್ಚಿನಲ್ಲಿ ಮದುವೆ ಮಾಡಿಕೊಳ್ಳುವ ಬಡ ಕುಟುಂಬಸ್ಥರ ಅಸಹಾಯಕತೆಯನ್ನೇ ಬಂಡವಾಳವಾಗಿಸಿಕೊಂಡು ತಂತ್ರಹೂಡುವ, ಮೋಸಗೊಳಿಸುವ ಅನೇಕ ಉದಾಹರಣೆಗಳನ್ನು ನೋಡಬಹುದು.

ಜಯಶ್ರೀ ಕಂಬಾರ ಅವರ 'ಮಾಧವಿ' ನಾಟಕ ಪುರಾಣದ ವಸ್ತುವನ್ನು ಆಧರಿಸಿ ಬರೆದರೂ ಅದು ಈ ಕಾಲದ ಅನೇಕ ಸಂವೇದನೆಗಳನ್ನು ಪ್ರತಿನಿಧಿಸುತ್ತದೆ. ಯಯಾತಿ ಮತ್ತು ಮಲತಾಯಿ ದೇವಯಾನಿ ಗಾಲವನಿಗೆ ಗುರುಕಾಣಿಕೆಯ ನೆಪದಲ್ಲಿ ಮಾಧವಿಯನ್ನು ದಾನವಾಗಿ ನೀಡುತ್ತಾರೆ. ಗಾಲವ ತನ್ನ ಸ್ವಾರ್ಥ ಮತ್ತು ಸಂಪತ್ತನ್ನುಗಳಿಸುವ ದೃಷ್ಟಿಯಿಂದ ಮಾಧವಿಯನ್ನು ಬೇರೆ ಬೇರೆ ರಾಜ್ಯದ ರಾಜರಿಗೆ ಮಾರಾಟ ಮಾಡುತ್ತಾನೆ. ಸಂತಾನಕ್ಕಾಗಿ ಮಾಧವಿಯನ್ನು ಎಲ್ಲರೂ ಸ್ವಾರ್ಥಕ್ಕಾಗಿ ಬಳಸಿಕೊಳ್ಳುವುದು ಆಧುನಿಕ ಸಂದರ್ಭದಲ್ಲಿ ಮಹಿಳಾ ಮಾರಾಟದ ನಂತರ ಮಹಿಳೆ. ಪ್ರಾಕೃತಿಕವಾಗಿ ಲಿಂಗಸಮಾನರಾಗಬೇಕಿದ್ದ ಗಂಡು–ಹೆಣ್ಣು ಪುರುಷ ಪ್ರಧಾನ ವ್ಯವಸ್ಥೆಯ ದಬ್ಬಾಳಿಕೆಯ ಕಾರಣಕ್ಕಾಗಿ ಅವಳನ್ನು ಬಹು ಬಗೆಯಲ್ಲಿ ಶೋಷಣೆಗೆ ಒಳಪಡಿಸುತ್ತಿರುವುದನ್ನು ಕಾಣಬಹುದು. ಇದರ ಭಾಗವಾಗಿ ಮಹಿಳೆಯರನ್ನು ಸರಕಾಗಿ ಭಾವಿಸಿರುವ ಪುರುಷ ಪ್ರಧಾನ ವ್ಯವಸ್ಥೆ ಮಾರಾಟದ ವಸ್ತುವಾಗಿಸಿರುವುದು ಅಮಾನವೀಯ ನಡೆಯಾಗಿದೆ. ಮನುಷ್ಯರ ಅಹಂಕಾರ, ಪ್ರತಿಷ್ಠೆ, ದುರಾಸೆಯಾಗಿ ಭಾಗವಾಗಿ ನಡೆಯುವ ಯುದ್ಧವು ಸಮಾಜದಲ್ಲಿ ಸೃಷ್ಟಿಸಬಹುದಾದ ಅಮಾನವೀಯ ವಾತಾವರಣ, ಸಾವು, ನೋವು, ಮನುಷ್ಯ ಕುಲದ ನಾಶದ ಕುರಿತು ವಿರೋಧಿ ನೆಲೆಯಲ್ಲಿ ಮಹಿಳಾ ನಾಟಕಗಳು ಚರ್ಚಿಸಿರುವುದು ಪ್ರಾಮುಖ್ಯತೆಯನ್ನು ಪಡೆದಿವೆ. ಈ ಎಲ್ಲಾ ವಿಚಾರಗಳನ್ನು ನಾಟಕವಾಗಿಸಿರುವ ನಾಟಕಕಾರ್ತಿಯರು ಸಮಾಜದ ಸಾಂಸ್ಕೃತಿಕ ನಿರಂತರತೆಯನ್ನು

ಪರಿಣಾಮಕಾರಿಯಾಗಿ ಗ್ರಹಿಸಿ ನಿರ್ವಹಿಸಿದ್ದಾರೆ.

**ಕೊನೆ ಟಿಪ್ಪಣಿಗಳು:**

1. ಇಂದಿರಾ ಹಾಲಂಬಿ, (1995), ಶ್ರೀಕೃಷ್ಣ ದೇವರಾಯ, ಉಡುಪಿ (ಆತ್ರಾಡಿ): ಸಂದೀಪ ಸಾಹಿತ್ಯ, ಪು.ಸಂ. 9, 10.
2. ನಾರಾಯಣ ಬಿ. ಪವಾರ (ಸಂ.), (2013), ಸಂಕೀರ್ಣ ಸಂಕಲನಗಳು ಸಂಪುಟ ೩: ಮಹಿಳಾ ನಾಟಕಗಳು, ವಿಜಯಪುರ (ಬಿಜಾಪುರ): ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಪು.ಸಂ. 160.
3. ಅದೇ, ಪು.ಸಂ. 163, 164.
4. ವಸುಂಧರಾ ಭೂಪತಿ (ಸಂ.), (2013), ನವ ವಿಧನಾಟಕಗಳು, ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ (ರಿ), ಪು.ಸಂ. 94, 95, 96.
5. ಇಂದಿರಾ ಹಾಲಂಬಿ (ಸಂ.), (2001), ವಿನೂತನ (ವಿವಿಧ ನಾಟಕ ಕರ್ತರಿಂದ), ಉಡುಪಿ (ಆತ್ರಾಡಿ): ಸಂದೀಪ ಸಾಹಿತ್ಯ, ಪು.ಸಂ. 31, 32.

**ಪರಾಮರ್ಶನ ಗ್ರಂಥಗಳು:**

1. ಇಂದಿರಾ ಹಾಲಂಬಿ, (1995), ಶ್ರೀಕೃಷ್ಣ ದೇವರಾಯ, ಉಡುಪಿ (ಆತ್ರಾಡಿ): ಸಂದೀಪ ಸಾಹಿತ್ಯ.
2. ಇಂದಿರಾ ಹಾಲಂಬಿ (ಸಂ.), (2001), ವಿನೂತನ (ವಿವಿಧ ನಾಟಕ ಕರ್ತರಿಂದ), ಉಡುಪಿ (ಆತ್ರಾಡಿ): ಸಂದೀಪ ಸಾಹಿತ್ಯ.
3. ವಸುಂಧರಾ ಭೂಪತಿ (ಸಂ.), (2013), ನವ ವಿಧನಾಟಕಗಳು, ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘ (ರಿ).
4. ನಾರಾಯಣ ಬಿ. ಪವಾರ (ಸಂ.), (2013), ಸಂಕೀರ್ಣ ಸಂಕಲನಗಳು ಸಂಪುಟ ೩: ಮಹಿಳಾ ನಾಟಕಗಳು, ವಿಜಯಪುರ (ಬಿಜಾಪುರ): ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ.
5. ಇಂದಿರಾ ಜೈಪ್ರಕಾಶ್, (2009), ಸ್ತ್ರೀವಾದಿ ಮನೋವಿಜ್ಞಾನ, ಹಂಪಿ: ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ.